SC.110/2022
PW.11

# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## ಎಸ್.ಸಿ –110/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ನಾಗೇಶ | ಪ್ರಾಸಾ: | 11 |
| ತಂದೆ ಹೆಸರು | : | ಚಿಕ್ಕಂಡಯ್ಯ | ಚಾಸಾ: | 17 |
| ವಯಸ್ಸು | : | 60 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ:10.03.2025 | |
| ವೃತ್ತಿ | : | ಗಾರೆ ಕೆಲಸ | | |
| ವಾಸ ಸ್ಥಳ | : | ಮುದ್ದಹಳ್ಳಿ | | |

**ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರವರಿಂದ**:

1. ಆರೋಪಿ ಗೊತ್ತು. ಆತನ ತಂದೆಯ ಹೆಸರು ಮಹದೇವಯ್ಯ. ನಮ್ಮ ಮನೆಯಿಂದ ಆರೋಪಿಯ ಮನೆ 3 ನೇ ಬೀದಿಯಲ್ಲಿರುತ್ತದೆ. ಆರೋಪಿಯ ಹೆಂಡತಿ ಗೊತ್ತಿಲ್ಲ. ಅವನಿಗೆ ಎಷ್ಟು ಮಕ್ಕಳು ಎನ್ನುವುದು ಸಹ ಗೊತ್ತಿಲ್ಲ. ಆರೋಪಿಯು ತನ್ನ ಹೆಂಡತಿಯನ್ನು ಯಾವ ವಿಚಾರಕ್ಕೆ ಅನುಮಾನಿಸುತ್ತಿದ್ದನು ಎನ್ನುವುದು ಗೊತ್ತಿಲ್ಲ. ಆರೋಪಿಯ ಹೆಂಡತಿ ಯಾವ ರೀತಿ ಸತ್ತಿರುತ್ತಾಳೆ ಎನ್ನುವುದು ಗೊತ್ತಿಲ್ಲ. ಈ ಕೇಸಿನ ವಿಚಾರ ಮತ್ತೇನು ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಸರ್ಕಾರಿ ಅಬಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಸರ್ಕಾರಿ ಅಭಿಯೋಜಕರವರಿಂದ ಃ**

2. "ಈಗ್ಗೆ 6 ವರ್ಷದಲ್ಲಿ --------- ಮಲ್ಲೇಶನನ್ನು ನೀರಿಗೆ ಎಸೆದಿರುತ್ತಾನೆ " ಎಂಬುದಾಗಿ ನಾನು ದಿಃ 15.12.2021 ರಂದು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ.12 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರು ಆರೋಪಿಯು ನಮ್ಮ

ಊರಿನವನಾದ್ದರಿಂದ ಆತನಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ**

ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆ ಃ ಇಲ್ಲ

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು